
# ಚಿರು ಮತ್ತು ಮರ

■ ಚಂದ್ರಿಕಾ ಹೆಗಡೆ, ಮತ್ತಿಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು



ಚಿರು ಒಬ್ಬ ಪುಟ್ಟ ಹುಡುಗ. ನಗರದ ದೊಡ್ಡ ಅಪಾರ್ಟ್‌ಮೆಂಟ್ ಒಂದರಲ್ಲಿ ಅವನ ಮನೆ ಇತ್ತು. ಆ ಅಪಾರ್ಟ್‌ಮೆಂಟಿನ ಪ್ಲೇ ಗ್ರೌಂಡಿನ ಪಕ್ಕದಲ್ಲೇ ಒಂದು ದೊಡ್ಡ ಆಲದ ಮರ ಇತ್ತು. ಆಟದ ಬಯಲಿನಲ್ಲಿ ಆಡುವ ಎಲ್ಲಾ ಮಕ್ಕಳಿಗೂ ಆ ಆಟದ ಸ್ಥಳದಲ್ಲಿದ್ದ ಜೋಕಾಲಿ, ಜಾರುಬಂಡಿ, ಸೀಸಾ.., ಕುದುರೆ ಇಷ್ಟ. ಇವುಗಳಿಗಿಂತ ಚಿರುಗೆ ಈ ಆಲದ ಮರ ಅಂದ್ರೆ ತುಂಬಾ ಇಷ್ಟ. ಅವನು ಹೆಚ್ಚು ಹೊತ್ತು ಈ ಮರದ ಅಡಿಯಲ್ಲಿಯೇ ಆಡ್ತಾ ಇದ್ದ. ಆ ಮರದಲ್ಲಿದ್ದ ಹಕ್ಕಿಗಳನ್ನು ನೋಡುತ್ತಾ, ಅವುಗಳ ಕೂಗನ್ನು ಕೇಳುತ್ತಾ, ಆ ಆಲದ ಮರದ ಬಿಳಲಿನಲ್ಲಿ ಜೋಕಾಲಿ ಆಡುತ್ತಾ ಖುಷಿಪಡ್ತಿದ್ದ. ಆ ಮರ ಚಿರುಗೆ ಆತ್ಮೀಯ ಗೆಳೆಯನ ಹಾಗೇ ಇತ್ತು. ಆ ಮರಕ್ಕೂ ಮಕ್ಕಳೆಂದರೆ ತುಂಬಾ ಪ್ರೀತಿ. ಮಕ್ಕಳೆಲ್ಲಾ ತನ್ನ ಬಳಿಗೆ ಬಂದು ಆಡುತ್ತಿರುವಾಗ ಮರ ತುಂಬಾ ಸಂಭ್ರಮಪಟ್ಟುಕೊಳ್ಳುತ್ತಿತ್ತು.

ಒಂದು ದಿನ ಆ ಅಪಾರ್ಟ್‌ಮೆಂಟ್ ಸಂಘದ ಆಡಳಿತ ಮಂಡಳಿಯ ಸದಸ್ಯರು ಸಭೆ ಸೇರಿ, ಈ ಮರವನ್ನು ಕಡಿದು ಆ ಜಾಗದಲ್ಲಿ ಅಪಾರ್ಟ್‌ಮೆಂಟಿನ ಕ್ಲಬ್ ಹೌಸ್ ನಿರ್ಮಿಸಬೇಕೆಂದು ನಿರ್ಧಾರ ಮಾಡಿದರು. ಈ ವಿಷಯ ತಿಳಿದು ಅಲ್ಲಿ ದಿನಾಲೂ ಆಡುತ್ತಿದ್ದ ಮಕ್ಕಳಿಗೆಲ್ಲ ತುಂಬಾ ಬೇಸರವಾಯಿತು. ಅಂದು ಚಿರು ಆಟವಾಡಲೆಂದು ಆಲದ ಮರದ ಬಳಿ ಹೋದಾಗ ಮರ ಕಡಿಯಲು ಬೇಕಾದ ಯಂತ್ರ, ಜೆಸಿಬಿ ಮರದ ಬಳಿ ನಿಂತಿದ್ದನ್ನು ನೋಡಿದ. ಮರುದಿನ ಬೆಳಗಾದರೆ ಮರವನ್ನು ಕಡಿಯುತ್ತಾರೆಂದು ಅವನಿಗೆ ತಿಳಿದು ತುಂಬಾ ದುಃಖವಾಯಿತು.

ಅವನು ಮರವನ್ನು ತಬ್ಬಿಕೊಂಡು ಅಳುತ್ತಾ ಕುಳಿತ. ಮರಕ್ಕೂ ತುಂಬಾ ಅಳು ಬಂತು. 'ಅಯ್ಯೋ ದೇವರೇ! ನಾಳೆ ಬೆಳಗಾದರೆ ನನ್ನನ್ನು ಕಡಿದು ಬಿಡುತ್ತಾರಲ್ಲಾ, ಈ ಮಕ್ಕಳ ಜೊತೆ ಇದೇ ನನ್ನ ಕೊನೇ ದಿನ' ಎಂದು ಅದು ದುಃಖದಿಂದ ಕಣ್ಣೀರು ಸುರಿಸುತ್ತಾ ಇತ್ತು. ಅಂದು ರಾತ್ರಿ ಮನೆಗೆ ಹೋಗಿ ಮಲಗಿದರೂ ಚಿರುಗೆ ನಿದ್ರೆಯೇ ಬರಲಿಲ್ಲ. ತನ್ನ ಪ್ರೀತಿಯ ಆಲದ ಮರವನ್ನು ಉಳಿಸಿಕೊಳ್ಳುವುದು ಹೇಗೆ ಎಂದು ಆತ ಚಿಂತೆ ಮಾಡುತ್ತಲೇ ಇದ್ದ. ಬಹಳ ಹೊತ್ತಾದ ಮೇಲೆ ಚಿರು ಏನನ್ನೋ ನಿರ್ಧರಿಸಿ, ಮೆಲ್ಲನೆ ಎದ್ದು ಬಾಗಿಲು ತೆರೆದು ಸದ್ದಾಗದಂತೆ ಹೊರಗೆ ಹೋಗಿ ಮರದ ಬಳಿ ಬಂದ. ಮರಕ್ಕೂ ಚಿಂತೆಯಿಂದ ನಿದ್ದೆ ಬಾರದೇ ಎಚ್ಚರವಾಗಿಯೇ ಇತ್ತು. ಚಿರು ಮರದ ಬಳಿಗೆ ಹೋಗಿ ಪಿಸುಧ್ವನಿಯಲ್ಲಿ 'ನನ್ನ ಪ್ರೀತಿಯ ಮರವೇ ನಿನ್ನನ್ನು ಉಳಿಸಲು ನಾನೊಂದು ಉಪಾಯ ಮಾಡಿದ್ದೇನೆ. ಏಳು ಹೋಗೋಣ' ಎಂದ. ಮರ ಅಚ್ಚರಿಯಿಂದ, 'ಹಾಂ ಎಲ್ಲಿಗೆ?' ಎಂದು ಕೇಳಿತು. ಆಗ ಚಿರು 'ಈ ನಗರದಿಂದ ಸ್ವಲ್ಪ ದೂರದಲ್ಲಿರುವ ಹಳ್ಳಿಯಲ್ಲಿ ನನ್ನ ಅಜ್ಜನ ಮನೆ ಮತ್ತು ತೋಟವಿದೆ. ತೋಟದಲ್ಲಿ ಬೇಕಾದಷ್ಟು ಜಾಗವಿದೆ. ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಬಿಡುತ್ತೇನೆ. ಅಲ್ಲಿ ಯಾರೂ ನಿನ್ನನ್ನು ಕಡಿಯಲು ಬರುವುದಿಲ್ಲ. ನನ್ನ ಅಜ್ಜನಿಗೆ ಮರಗಳೆಂದರೆ ತುಂಬಾ ಪ್ರೀತಿ. ಅಲ್ಲಿ ಅವರು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಏಳು, ಇಲ್ಲಿಂದ ಬೇಗ ಹೊರಟು ಬಿಡೋಣ' ಎಂದ. ಚಿರುನ ಮಾತು ಕೇಳಿ ಮರಕ್ಕೆ ಖುಷಿಯಾದರೂ ಹೇಗೆ ಹೋಗುವುದು, ನನಗೆ ಇಲ್ಲಿಂದ ಎದ್ದು ನಡೆಯಲು ಬಾರದಲ್ಲ ಎಂದು ಬೇಜಾರು ಮಾಡಿಕೊಂಡಿತು. ಆಗ ಚಿರು, 'ಪ್ರಯತ್ನ ಮಾಡು, ನಾನು ನಿನಗೆ ಸಹಾಯ ಮಾಡುತ್ತೇನೆ' ಎಂದ. ಆಗ ಮರ ಪ್ರಯತ್ನಪಟ್ಟು ನೆಲದಿಂದ ತನ್ನ ಬೇರುಗಳನ್ನು ಎಳೆದುಕೊಂಡು ಮೆಲ್ಲನೆ ಹೆಜ್ಜೆ ಎತ್ತಿಟ್ಟಿತು! 'ಹಾಂ ಹೀಗೆಯೇ ಬಾ. ಇನ್ನೂ ಸ್ವಲ್ಪ ಬೇಗ ಬೇಗ ಹೆಜ್ಜೆ ಹಾಕು. ಬೆಳಗಾಗುವುದರೊಳಗೆ ಅಜ್ಜನ ಮನೆ ಸೇರಿಕೊಳ್ಳೋಣ' ಎಂದ ಚಿರು ಮರದ ಕೈಯನ್ನು ಹಿಡಿದುಕೊಂಡು ಅಜ್ಜನ ಮನೆಯ ಕಡೆಗೆ ನಡೆದ.

ನಡೆದೂ ನಡೆದೂ ಬೆಳಗಾಗುವಷ್ಟರಲ್ಲಿ ಅವರು ಅಜ್ಜನ ಮನೆ ಸೇರಿಕೊಂಡರು. ಮುಂಜಾನೆಯೇ ಮನೆ

